ಗಣಿಗಳನ್ನು ರಾಷ್ಟ್ರೀಕರಣ ಮಾಡಿ ತಮಗೆ ಬರಬಹುದಾದ ರಿಸೋರ್ಸಸ್ ಅನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಹಿರಿಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಎನ್. ಎಸ್. ಖೇಡ್.—ಸರ್ಕಾರಕ್ಕೆ ಬರಬೇಕಾದಂತಹ ಕ್ವಾರಿ ಕಲ್ಲುಗಳ ವ್ಯವಹಾರದಲ್ಲಿ ಬಹಳ ಅನ್ಯಾಯ ಆಗಿದೆ ಎಂದು ಎಲ್ಲಾ ಸದಸ್ಯರಿಗೂ ಗೊತ್ತಿದೆ. ನವಂಗೂ ಗೊತ್ತಿದೆ ಇದನ್ನು ಮುಂದೆ ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಲೀಸ್ ವ್ಯವಸ್ಥೆ ಮಾಡತಕ್ಕದ್ದರಿಂದ ಒಬ್ಬೊಬ್ಬರು ನೂರಾರು, ಸಾವಿರಾರು ಎಕರೆ ಜಮೀನನ್ನು ತೆಗೆದುಕೊಂಡು ದುರುಪಯೋಗಪಡಿಸಿಕೊಂಡಿರುವ ಸಾಕಷ್ಟು ಉದಾಹರಣೆಗಳು ಉಂಟು ಒಬ್ಬರಿಗೇ ಎಂಟಾಪಲಿ ಮಾಡುತ್ತಾರೆ ಎನ್ನುವುದು ನವಗೆ ತಿಳಿದಿದೆ. ಇದನ್ನು ತಪ್ಪಿಸಿ ಇಂಡಸ್ಟ್ರೀಸ್ ಪ್ರಾಸ್ಪರಸ್ ಆಗುವ ದೃಷ್ಟಿಯಿಂದ ಏನಾದರೂ ಯೋಗ್ಯ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಎಂಟಾಪಲಿ ಮಾಡಬೇಕು ಎಂಬ ಯಾವ ಪ್ರಯತ್ನ ಮಾಡಿಲ್ಲ. ೧೦ ವರ್ಷಗಳ ಹಿಂದೆ ಒಬ್ಬರಿಗೆ ಲೀಸ್ ಕೊಟ್ಟಿದ್ದಾರೆ. ಮುಂದೆ ಕೊಡುವಾಗ ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇನೆ.

ಮತ್ತೆ ಈ ಬಗ್ಗೆ ಆಮೂಲಾಗ್ರವಾದ ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ. ಇದು ಎರಡು ಇಲಾಖೆಗಳಿಗೆ ಸಂಬಂಧಪಟ್ಟಿವೆ. ಇದರ ಜೊತೆಗೆ ಇದಕ್ಕೆ ಕೆಲವು ತಿದ್ದುಪಡಿಗಳನ್ನೂ ಮಾಡ ಬೇಕಾಗುತ್ತದೆ. ಆದ್ದರಿಂದ ನಾನು ಮಾನ್ಯ ಕಂದಾಯ ಮಂತ್ರಿಗಳ ಹತ್ತಿರ ಮಾತನಾಡಿ ಈ ಬಗ್ಗೆ ಕೆಲವೊಂದು ಬದಲಾವಣೆಗಳನ್ನು ಮಾಡಿಸುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಈ ಬಾಬಿನಿಂದ ರಾಜ್ಯದ ಬೊಕ್ಕಸಕ್ಕೆ ಅನೇಕ ವರ್ಷಗಳಿಂದ ಹೆಚ್ಚಿನ ಆದಾಯ ಬರಬೇಕಾಗಿತ್ತು. ಆದರೆ ಕಡಿಮೆ ಆದಾಯ ಬರುತ್ತಿದೆ. ಅದೇ ಆಂಧ್ರದಲ್ಲಿ ಈ ಬಾಬಿನಿಂದ ಅಲ್ಲಿನ ಸರ್ಕಾರಕ್ಕೆ ನೂರು ಕೋಟಿಗೂ ಹೆಚ್ಚು ಆದಾಯ ಬರುವ ವ್ಯವಸ್ಥೆ ಮಾಡಿ ಕೊಂಡಿದ್ದಾರೆ. ಈ ಬಗ್ಗೆ ಕಳೆದವರ್ಷ ಪತ್ರಿಕೆಗಳಲ್ಲಿ ಬಂದ ವರದಿಯನ್ನು ನಾನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು ? ಖಂಡಿತವಾಗಿ ಅರಣ್ಯ ಇಲಾಖೆ, ಕಂದಾಯ ಇಲಾಖೆ ಮತ್ತು ಗಣಿ ಇಲಾಖೆ ಈ ಮೂರು ಇಲಾಖೆಗಳು ಸೇರಿಕೊಂಡು ರಾಜ್ಯದ ಬೊಕ್ಕಸಕ್ಕೆ ಈ ಬಾಬಿನಿಂದ ಹೆಚ್ಚು ಆದಾಯ ತರುವಂತಹ ರೀತಿಯಲ್ಲಿ ಪ್ರಾಮಾಣಿಕವಾದಂಥ ಕೆಲಸ ಮಾಡಬೇಕು. ಮತ್ತು ಈ ಬಗ್ಗೆ ಒಂದು ಪರ್ಯಾಯ ವ್ಯವಸ್ಥೆ ಕೈಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತಾರೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ನನಗೆ ಪೇಪರ್ ಕಟಿಂಗ್ಸ್‌ನ್ನು ಕಳುಹಿಸಿ ಕೊಟ್ಟಿರುವುದು ನಿಜ. ನಾನು ಈ ವಿಚಾರದಲ್ಲಿ ಆಂಧ್ರ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆಂದು ತಿಳಿದುಕೊಂಡು ಬರುವಂತೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಕೊಟ್ಟಿದ್ದೆ. ಆದರಂತೆ ಅವರು ಅಲ್ಲಿಗೆ ಹೋಗಿ ಬಂದು ವರದಿ ಕೊಟ್ಟಿದ್ದಾರೆ. ಈ ಒಂದು ಸಮೀಕ್ಷಾ ವರದಿಯ ಆಧಾರದ ಮೇಲೆ ನಾವು ಸಧ್ಯದಲ್ಲಿಯೇ ನಮ್ಮ ರಾಜ್ಯದಲ್ಲಿಯೂ ಸಹ ಸಮಗ್ರವಾದಂಥ ಬದಲಾವಣೆಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಸಾಧ್ಯವಾದಷ್ಟು ಬೇಗ ಇದನ್ನು ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ಖಿಓ. ಮಾನ್ಯ ಸದಸ್ಯರ ಗೈರು ಹಾಜರಿ

ಭದ್ರಾ ಅಭಯಾರಣ್ಯವನ್ನು ಗೇಮ್ಸ್ ಸ್ಯಾಂಕ್ಚುರಿಯಾಗಿ ಮಾಡುವುದು

೧೦೯೧. ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಭಯಾರಣ್ಯವನ್ನು ಗೇಮ್ಸ್ ಸ್ಯಾಂಕ್ಚುರಿಯಾಗಿ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡ ತೀರ್ಮಾನೇನು ?

ಅ) ಅಲ್ಲಿ ಹೆಬ್ಬೆ ಮಾಡ್ಲು ಜಾಗ್ರ ಹಿಪ್ಪ ಮುತ್ತೋಡಿ ಕೋದಿ ಗ್ರಾಮಂಗಳ ಅಭಿವೃದ್ಧಿಯನ್ನು ಸುಮಾರು ೨೦ ವರ್ಷಗಳಿಂದ ಮಾಡದೆ ಅಲ್ಲಿಯ ಜನರಿಗ ತೊಂದರೆಯಾಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಅಲ್ಲಿಯ ಗ್ರಾಮಂಸ್ಥರನ್ನು ಬೇರೆ ಕಡೆಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಜೆ. ಎಸ್. ಬಾಗಲಕೋಟೆ (ರಾಜ್ಯ ಅರಣ್ಯ ಮಂತ್ರಿಗಳು).—

ಅ) ಸರ್ಕಾರವು ಸಂಖ್ಯೆ ಎಎಫ್‌ಡಿ ೨೫ ಎಫ್‌ಡಬ್ಲ್ಯೂಎಲ್ ೭೪ ದಿನಾಂಕ ೨೫-೨-೧೯೭೪ರಲ್ಲಿ ೪೯೨.೪೬ ಚದರ ಕಿ.ಮೀ. ಪ್ರದೇಶವನ್ನು ಭದ್ರಾ ಅಭಯಾರಣ್ಯವೆಂದು ಘೋಷಿಸಲಾಗಿದೆ.

ಆ) ಬಂದಿದೆ

ಇ) ಹೌದು

ಈ) ಸರ್ಕಾರವು ಐದು ಸದಸ್ಯರಿರುವ ಸರ್ಕಾರಿ ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಅಭಯಾರಣ್ಯದಲ್ಲಿ ಬರುವ ಜನರನ್ನು ಸ್ಥಳಾಂತರಿಸಲು ಬೇಕಾದ ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಈ ಸಮಿತಿಯು ಶಿಫಾರಸ್ಸನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ೧೯೭೪ರಲ್ಲಿಯೇ ಸರ್ಕಾರ ಈ ಬಗ್ಗೆ ಒಂದು ಘೋಷಣೆಯನ್ನು ಹೊರಡಿಸಿದ್ದರೂ ಸಹ ಈ ಸಮಿತಿಯವರು ಈ ಬಗ್ಗೆ ಇವೊತ್ತಿನವರೆಗೆ ಯಾವುದೇ ಒಂದು ಕಾರ್ಯಕ್ರಮ ಕೈಕೊಳ್ಳದಿರುವ ಉದ್ದೇಶವಾದರೂ ಏನು ಎಂಬುದನ್ನು ತಿಳಿಸಬೇಕು. ಈಗ ಅಲ್ಲಿ ವಾಸ ಮಾಡುತ್ತಿರುವ ಜನರು ನನ್ನ ಕ್ಷೇತ್ರಕ್ಕೂ ಸಹ ಸೇರಿದ್ದಾರೆ. ಮತ್ತೆ ಕೆಲವು ಜನರು ಚಿಕ್ಕಮಗಳೂರು ಕ್ಷೇತ್ರಕ್ಕೆ ಸೇರಿದ್ದಾರೆ. ಈ ಜನರಿಗೆ ಸರ್ಕಾರದವರು ಯಾವುದೇ ನಾಗರೀಕ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಇದರ ಜೊತೆಗೆ ಸರ್ಕಾರದವರು ಈ ಜನರ ಸಲುವಾಗಿ ಕಳೆದ ಹತ್ತು ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಯಾವಯಾವ ಗ್ರಾಮಗಳು ಭದ್ರಾ ಅಭಯಾರಣ್ಯವೆಂದು ಘೋಷಣೆ ಮಾಡಿರುವ ಜಾಗದಲ್ಲಿ ಬರುತ್ತವೆ ಎಂಬುದು ಅಲ್ಲಿನ ಜನರಿಗೆ ತಿಳಿಯದ ಕಾರಣ, ಅವರು ತಮ್ಮ ಜಮೀನುಗಳನ್ನು ಬಿಟ್ಟು ಬೇರೆ ಜಾಗಗಳಿಗೆ ಹೋಗಿ ಉತ್ತಮ ರೀತಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಕಾದು ಕುಳಿತಿರುವವರಿಗೂ ಇರತಕ್ಕಂಥ ಜಾಗ ಇದರಲ್ಲಿ ಸೇರಬಹುದೆಂದು ಕೆಲವರು ಹೇಳುತ್ತಿದ್ದಾರೆ. ಇದರಿಂದ ಅಲ್ಲಿನ ಜನರಲ್ಲಿ ಒಂದು ರೀತಿಯ ಭೀತಿ ಬಂದಿದೆ. ಆದ್ದರಿಂದ ಇದರಲ್ಲಿ ಯಾವಯಾವ ಗ್ರಾಮಗಳು ಸೇರುತ್ತವೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ಮತ್ತು ಬೇರೆ ಕಡೆಗಳಲ್ಲಿ ಅಲ್ಲಿನ ಜನರಿಗ ಎಲ್ಲಾ ರೀತಿಯ ಸೌಲಭ್ಯವನ್ನು ಎಷ್ಟು ದಿವಸಗಳಲ್ಲಿ ಒದಗಿಸುತ್ತೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಜೆ. ಎಸ್. ಬಾಗಲ್‌ಕೋಟೆ.—ಸನ್ಮಾನ್ಯ ಹಿರಿಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈಗಾಗಲೇ ಸಾಕಷ್ಟು ತಡವಾಗಿ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಈ ಒಂದು ಸಮಿತಿಯನ್ನು ನೇಮಕ ಮಾಡಿದ್ದು ೧೯೮೬ನೇ ಇಸವಿಯಲ್ಲಿ. ಈ ಸಮಿತಿಯವರು ಈಗಾಗಲೇ ಎರಡು ಸಲ ಸಭೆ ಸೇರಿ ವಿಷಯಗಳನ್ನು ಚರ್ಚೆ ಮಾಡಿದ್ದಾರೆ. ಆದಷ್ಟೂ ಶೀಘ್ರವಾಗಿ ಈ ಬಗ್ಗೆ ಅವರು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಇದರಲ್ಲಿ ಯಾವಯಾವ ಗ್ರಾಮಗಳು ಸೇರುತ್ತವೆಂಬುದನ್ನು ಕೇಳಿದ್ದಾರೆ. ಆದರ ಪಟ್ಟಿಯನ್ನು ನಾನು ಅವರಿಗೆ ಒದಗಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ —ನನಗೆ ಪಟ್ಟಿ ಒದಗಿಸಿಲ್ಲ, ಅದನ್ನು ಒದಗಿಸಿಕೊಡುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟೆ.—ಕಳಿಸಿಕೊಡುತ್ತೇನೆ.

ಶ್ರೀ ಐ.ಬಿ. ಶಂಕರ್.—ಈಗಾಗಲೇ ಸರ್ಕಾರದವರು ಎರಡು ಸಾರಿ ತೀರ್ಮಾನ ಮಾಡಿದ್ದೇವೆಂದು ಹೇಳಿದ್ದಾರೆ. ಭದ್ರಾವತಿ ಏರಿಯಾದಲ್ಲಿ ಪೊಡೇಸ್ ಕಂಪನಿಗೆ ಸಾವಿರಾರು ಎಕರೆ ಲೀಸ್‌ಗೆ ಕೊಟ್ಟಿದ್ದೀರಿ. ಅದು ವಾಪಸ್ ಬರುತ್ತದೆಯೇ ? ಅದನ್ನು ಬದಲಾವಣೆಮಾಡಿ, ಆ ಜಮೀನನ್ನು ಈ ಜನರಿಗೆ ಕೊಡಿಸುವುದಕ್ಕೆ ಸಾಧ್ಯವೇ ?

ಶ್ರೀ ಜಿ. ಎಸ್. ಬಾಗಲಕೋಟೆ.—ಸನ್ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಳಿಟಿ ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

ಕಬ್ಬಿನ ಬೆಲೆ ನಿಗದಿ ಬಗ್ಗೆ

೮೦೯. ಶ್ರೀ ಯು. ಭೂಪತಿ (ವಿಧಾನಸಭಾ ಸದಸ್ಯರು).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅತಿ ಹೆಚ್ಚಿನ ಬೆಲೆಯನ್ನು ಕಬ್ಬಿಗೆ ನಿಗಧಿ ಮಾಡಿರುವ ಸಕ್ಕರೆ ಕಾರ್ಖಾನೆ ಯಾವುದು ಹಾಗೂ ನಿಗಧಿಗೊಳಿಸಿದ ಒಂದು ಮೆಟ್ರಿಕ್ ಟನ್ ಕಬ್ಬಿನ ಬೆಲೆ ಏನು?

ಆ) ರಾಜ್ಯದಲ್ಲಿ ಅತಿ ಕಡಿಮೆ ಬೆಲೆಯನ್ನು ಕಬ್ಬಿಗೆ ನಿಗಧಿ ಮಾಡಿರುವ ಸಕ್ಕರೆ ಕಾರ್ಖಾನೆ ಯಾವುದು: ಹಾಗೂ ನಿಗದಿಗೊಳಿಸಿದ ಕಬ್ಬಿನ ಬೆಲೆ ಎಷ್ಟು; ಕಂಪ್ಲಿ ಹೊಸಪೇಟೆ ಹಾಗೂ ಗಂಗಾವತಿ ಸಕ್ಕರೆ ಕಾರ್ಖಾನೆಗಳಲ್ಲಿ ನಿಗದಿಗೊಳಿಸಿದ ಒಂದು ಟನ್ ಕಬ್ಬಿನ ಬೆಲೆ ಏನು?

ಇ) ಸಕ್ಕರೆ ಬೆಲೆ ಎಲ್ಲಾ ಕಡೆ ಒಂದೇ ಇದ್ದು ಕಬ್ಬಿನ ಬೆಲೆ ಮಾತ್ರ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದಲ್ಲಿ ವ್ಯತ್ಯಾಸವಿರಲು ಕಾರಣವೇನು?

ಈ) ಈ ವ್ಯತ್ಯಾಸ ಸರಿಪಡಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೧೯೬೬-೬೭ನೇ ಸಾಲಿಗೆ : ಹಿರಣ್ಯಕೇಶಿ ಸಹಕಾರ ಸಕ್ಕರೆ ಕಾರ್ಖಾನೆ, ಸಂಕೇಶ್ವರ ಬೆಳಗಾಂ ಜಿಲ್ಲೆ—ಮೆಟ್ರಿಕ್ ಟನ್‌ಗೆ ೪೧೦-೦೦ ರೂ.ಗಳು (ರೈತರಿಗೆ ನೀಡುವ ಕೊಳ್ಳುವ ತೆರಿಗೆ ಸಬ್ಸಿಡಿ ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚ ಸೇರಿ)

೧೯೬೬-೬೭ನೇ ಸಾಲಿಗೆ ; ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಬೀದರ್, ಮೆಟ್ರಿಕ್ ಟನ್ ಒಂದಕ್ಕೆ ರೂ. ೩೫೫-೮೫ (ರೈತರಿಗೆ ನೀಡುವ ಕೊಳ್ಳುವ ತೆರಿಗೆ ಸಬ್ಸಿಡಿ, ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚ ಸೇರಿ)

ಆ) ೧೯೬೬-೬೭ನೇ ಸಾಲಿಗೆ : (೧) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಬಾತಿ, ದಾವಣಗೆರೆ, ಮೆಟ್ರಿಕ್ ಟನ್ ಒಂದಕ್ಕೆ ೨೬೦-೦೦ ರೂ.ಗಳು (ರೈತರಿಗೆ ನೀಡುವ ಕೊಳ್ಳುವ ತೆರಿಗೆ ಸಬ್ಸಿಡಿ ಸೇರಿ) (೨) ದಾವಣಗೆರೆ ಸಕ್ಕರೆ ಕಾರ್ಖಾನೆ (ನಿ) ದಾವಣಗೆರೆ (ಸಂಯುಕ್ತ ರಂಗ), ಮೆಟ್ರಿಕ್ ಟನ್ ಒಂದಕ್ಕೆ ೨೬೦-೦೦ ರೂ.ಗಳು (ರೈತರಿಗೆ ನೀಡುವ ಕೊಳ್ಳುವ ತೆರಿಗೆ ಸಬ್ಸಿಡಿ ಸೇರಿ)

೧೯೬೬-೬೭ನೇ ಸಾಲಿಗೆ : ವಿಜಾಪುರ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಎಂ.ಕೆ. ಹುಬ್ಬಳ್ಳಿ ಬೆಳಗಾವಿ ಜಿಲ್ಲೆ. ಮೆಟ್ರಿಕ್‌ಟನ್ ಒಂದಕ್ಕೆ ರೂ. ೨೬೯-೦೦ ಮುಂಗಡವಾಗಿ) (ರೈತರಿಗೆ ನೀಡುವ್ಕೊಳ್ಳುವ ತೆರಿಗೆ ಸಬ್ಸಿಡಿ ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚ ಸೇರಿ)